# ಅಕ್ಕಾ ಅಕಟಕಟೆನ್ನ ಗಂಡ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** This is from the book: Purandara Sahitya Darshana, Samputa 1, Jeevana Darshana edited by Prof. S.K. Ramachandra Rao
3. **Note:** Lyrics mentioned without highlights are as per Ref. 1. The wordings given as per Ref. 2 are almost similar to Ref. 1 except one word which is marked in yellow highlights.
4. **Note:** The song and lyrics do not match. Could not get the song as per the lyrics in the above standard books.

ರಾಗ ಧನ್ಯಾಸಿ ಏಕ ತಾಳ

ಅಕ್ಕಾ ಅಕಟಕಟೆನ್ನ ಗಂಡ ವೈಷ್ಣವನಾದ ಕಾರಣ
ರಕ್ಕಸಾಂತಕನ ಭಜಿಸಿ ಬರಿದಾಯ್ತೆನ್ನ ಬದುಕು || ಪ ||

ಅಡ್ಡ ಗಂಧವನಿಟ್ಟುಕೊಂಡು ರುದ್ರ ದೇವರ ಭಜಿಸುವಾಗ
ಬಡ್ಡಿಗೆ ಹಣವ ಕೊಟ್ಟು ಸುಖದೊಳಿದ್ದೆವು
ಅಡ್ಡ ಗಂಧ ಬಿಟ್ಟು ದೊಡ್ಡ ನಾಮ ಮುದ್ರೆ ಧರಿಸಲಾಗಿ
ಬಡ್ಡಿ ಬಾಚಿ ಹೋಗಿ ಬಾಯ್ಗೆ ಗಡ್ಡೆ ಬಿದ್ದಿತು || 1 ||

ಹೆಡಿಗೆ ತುಂಬ ದೇವರು ನಮ್ಮ ಮನೆಯೊಳಗಿರುವಾಗ
ಒಡವೆ ವಸ್ತು ಇಟ್ಟುಕೊಂಡು ಸುಖದೊಳಿದ್ದೆವು
ಒಡೆಯ ಹರಿಯೊಬ್ಬ ಸರ್ವರೊಡೆಯನೆಂದು ಭಜಿಸಲಾಗಿ
ಒಡವೆ ಹೋಗಿ ಬಡತನ ಗಡನೆ ಬಂದಿತು || 2 ||

ಮಿತ್ರೆ ಕೇಳೆ ನಮ್ಮ ಮನೆ ಮದುವೆ ಮುಂಜಿ ಕಾಲದಲ್ಲಿ
ಅರ್ತಿಯಿಂದ ಒಮ್ಮೆ ಕಚ್ಚೆ ಕಟ್ಟುತಿದ್ದೆವು
ನಿತ್ಯ ಕಚ್ಚೆಯನ್ನು ಹಾಕಿ ಸೀರೆಯನ್ನು ಉಡಲಾಗಿ
ವ್ಯರ್ಥವಾಗಿ ಬಾಳುವೆ ಬದುಕು ಹಾಳಾಗ್ಹೋಯಿತು || 3 ||

ಕಾರ ಹುಣ್ಣಿಮೆ ಕಾಲದಲ್ಲಿ ಮೂಲಂಗಿಗೆ ಬೆಳ್ಳುಳ್ಳಿಕ್ಕಿ
ತೋರಿದರೆ ನಮ್ಮ ದೇವರು ವರವ ಕೊಡುತಿದ್ದ
ಈ ವೀರ ವೈಷ್ಣವಗೆ ಕೊಟ್ಟು ತ್ರಾಹಿ ಎನಲಾಗಿ
ಸೇರಿದಾ ಬದುಕು ಎಲ್ಲ ಹಾರಿ ಹೋಯಿತು || 4 ||

ಎಲ್ಲಮ್ಮ ಯಕಲಾತಿ ಉಡ್ಡಿ ಮೈಲಾರ ದೇವರ
ಕಲ್ಲೆಂದು ಭಜಿಪಾಗ ಕ್ಷೇಮವಿತ್ತೆ
ಬಲ್ಲಿದ ಪುರಂದರ ವಿಠಲನ ಭಜಿಸಲು
ಸಲ್ಲದ ವೈಕುಂಠ (ಸಲ್ಲುವಂತಾದೀತು) (ಸಲ್ಲುವಂತಾಯಿತು) || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಈ ಪದ ವೈಷ್ಣವ ಭಾಗವತರ ಹಿರಿಮೆಯನ್ನು ಮಾರ್ಮಿಕವಾಗಿ ಕಾಣಿಸುತ್ತದೆ. ಅನ್ಯ ನಿಷ್ಠೆಯ ನಿಂದನೆಯೂ ಇದೆ. ಈ ಪದವು ಪುರಂದರ ದಾಸರದ್ದೇ ಎಂಬ ನಿಶ್ಚಯವಿಲ್ಲ. 'ಅಡ್ಡ ಗಂಧ'ದವರೆನ್ನುವ ನಿರ್ದೇಶನ ಸ್ಮಾರ್ತ ಸಂಪ್ರದಾಯದವರಿಗೆ ಒದಗಿದ್ದು ಈಚೆಗೆ. ಇದು ಪುರಂದರ ದಾಸರದ್ದೇ ಹೌದಾದರೆ ಅವರು ಹರಿದಾಸ ದೀಕ್ಷೆಯನ್ನು ವಹಿಸುವ ಮೊದಲು ಅವರ ಧರ್ಮ, ವೃತ್ತಿ, ಆಚಾರ, ನಂಬಿಕೆಗಳನ್ನು ಕುರಿತ ಪ್ರಸ್ತಾಪ ಇಲ್ಲಿ ಬರುತ್ತದೆ.

**ಗಡ್ಡೆ** – ಮಣ್ಣಿನ ಉಂಡೆ.

**ಹೆಡಿಗೆ** – ಹೆಡಗೆ; ಬುಟ್ಟಿ. ಬಿದಿರಿನ ಬುಟ್ಟಿಯಲ್ಲಿ ದೇವರ ಮೂರ್ತಿಗಳನ್ನಿರಿಸಿಕೊಂಡು ಪೂಜೆಯ ಕಾಲದಲ್ಲಿ ಅವನ್ನೆಲ್ಲ ಹೊರಕ್ಕೆ ತೆಗೆದು ಪೂಜೆ ಸಲ್ಲಿಸುವ ವಾಡಿಕೆಯನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಹಲವಾರು ದೇವರುಗಳನ್ನು ಕ್ಷುದ್ರ ಫಲಪ್ರದಗಳಾಗಿ ಪೂಜಿಸುವ ಮನೋಧರ್ಮ ಇಲ್ಲಿನ ತಾತ್ಪರ್ಯ.

**ಗಡನೆ** – ಗಡಗಡನೆ; ಬೇಗ.

**ಅರ್ತಿಯಿಂದ ಒಮ್ಮೆ ಕಚ್ಚೆ** – ಭಾಗವತ ಸಂಪ್ರದಾಯದ ಸ್ಮಾರ್ತರಲ್ಲಿ ಹೆಂಗಸರು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹೊರಕಚ್ಚೆಯನ್ನು ಹಾಕಿ ಸೀರೆಯನ್ನುಡುತ್ತಾರೆ; ಉಳಿದಂತೆ ಒಳಕಚ್ಚೆ. ವೈಷ್ಣವ ಭಾಗವತರಾದರೋ ಪ್ರತಿ ದಿನವೂ ಹೊರಕಚ್ಚೆಯ ಸೀರೆಯನ್ನೇ ಉಡುವರು.

**ಅರ್ತಿಯಿಂದ –** ಶ್ರದ್ಧೆಯಿಂದ, ಪ್ರೀತಿಯಿಂದ.

**ತ್ರಾಹಿ ಎನಲಾಗಿ –** ಹರಿಯನ್ನು 'ಕಾಪಾಡು' ಎಂದು ಮಾತ್ರ ಬೇಡಿಕೊಳ್ಳಲಾಗಿ; ಎಂದರೆ ದೇವರಿಗೆ ಎಡೆಯನ್ನಿಟ್ಟು ಅದಕ್ಕೆ ಪ್ರತಿಫಲವಾಗಿ ಕೋರಿಕೆಯನ್ನು ತೀರಿಸು ಎನ್ನದೆ, ಶರಣು ಹೊಕ್ಕರೆ ಸಾಕು ಎನ್ನುವ ಹರಿದಾಸ ಮನೋಭಾವ.

**ಸೇರಿದಾ ಬದುಕು –** ಇಲ್ಲಿಯವರೆಗೆ ಬಾಳಿದ ಬದುಕು.

**ಎಲ್ಲಮ್ಮ… –** ಸಣ್ಣ ಪುಟ್ಟ ಗ್ರಾಮ ದೇವತೆಗಳು; ಅವರ ಶಿಲಾಮೂರ್ತಿಗಳನ್ನೇ ದೇವರೆಂದು ಬಗೆದು ಪೂಜಿಸುವಾಗ.

**ಸಲ್ಲದ ವೈಕುಂಠ –** ಬೇಗ ಹೊಂದಲಾಗದ ವೈಕುಂಠ ಲೋಕ.

**Classification:** Keerthane
**Ankita:** purandara vittala
**Location:** NA
**Category:** Jeevana Darshana
**Sub-Category:** pati, Vishnu, bhajane, gandha, shiva, rokka, sukha, bayi, deva, mane, abharana, Krishna, mylara, kallu, vaikunta, mitra, badava, baduku, maduve,
**Pravachana:** NA
**Explanation:** NA